ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1577
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 18.03.2021

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಸಮಗ್ರ ನೀರಾವರಿ ಯೋಜನೆಗಳಾವುವು;	ವಿಜಯಪುರ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ನೀರಾವರಿ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಆ)	ನೀರಾವರಿ ಯೋಜನೆ ಗಳನ್ನು ಸಂಪೂರ್ಣಗೊಳಿಸಲು ಸರ್ಕಾರ ನಿಗದಿಪಡಿಸಿರುವ ಸಮಯ ಎಷ್ಟು;	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಲ್ಲಿ ಆಲಮಟ್ಟಿ ಜಲಾಶಯದಡಿ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್. 519.60 ರಿಂದ ಆರ್.ಎಲ್. 524.256 ಮೀ.ಗೆ ಎತ್ತರಿಸುವುದು ಹಾಗೂ ಹಂಚಿಕೆಯಾದ 130 ಟಿ.ಎಂ.ಸಿ ನೀರಿನ ಬಳಕೆಯು ಕೃಷ್ಣಾ ನ್ಯಾಯಾಧೀಕರಣ-2 ರ ತೀರ್ಪಿನ ಗೆಜೆಟ್ ಅಧಿಸೂಚನೆಗೆ ಒಳಪಟ್ಟಿರುತ್ತದೆ. ಸದರಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆ ಕಾಯ್ದಿರಿಸಿ ಪೂರ್ವಬಾವಿಯಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಲ್ಲಿಯ ಯೋಜನೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ ವಿಜಯಪುರ ಜಿಲ್ಲೆ ಸಂಬಂಧಿಸಿದಂತೆ ಮುಳವಾಡ ಏತ ನೀರಾವರಿ, ಚಿಮ್ಮಲಗಿ ಏತ ನೀರಾವರಿ ಮತ್ತು ಇಂಡಿ ಏತ ನೀರಾವರಿ ವಿಸ್ತರಣೆ ಯೋಜನೆಗಳಡಿಯ ಮುಖ್ಯ ಸ್ಥಾವರ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿದ್ದು, ಪ್ರಾಯೋಗಿಕವಾಗಿ ಕಾರ್ಯಾರಂಭಗೊಳಿಸಲಾಗಿದೆ. ಇದಲ್ಲದೇ, ಮುಖ್ಯ /ಶಾಖಾ ಕಾಲುವೆ ಮತ್ತು ವಿತರಣಾ ಕಾಲುವೆ ಜಾಲಗಳ ನಿರ್ಮಾಣ ಕಾಮಗಾರಿಗಳನ್ನು ಮುಂದುವರೆಸುತ್ತಾ ಆದ್ಯತೆಯ ಮೇರೆಗೆ ಕಾರ್ಯಗತಗೊಳಿಸಲಾಗುತ್ತಿದೆ. ಮುಂದುವರೆದು, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಬರುವ ಉಪಯೋಜನೆಗಳ ಕಾಲುವೆ ಜಾಲಗಳಿಂದ ಅಚ್ಚುಕಟ್ಟು ವ್ಯಾಪ್ತಿಯಲ್ಲಿಯ ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಪ್ರಗತಿಯಲ್ಲಿರುವ ವಿಜಯಪುರ ಜಿಲ್ಲೆಯಡಿಯ ನೀರಾವರಿ ಯೋಜನೆಗಳನ್ನು ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇರೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
ಇ)	ಯಾವ ಯಾವ ಯೋಜನೆ ಗಳು ಪೂರ್ಣಗೊಂಡಿವೆ; ಹಾಲಿ ನಡೆಯುತ್ತಿರುವ ಯೋಜನೆಗಳ ಸಂಪೂರ್ಣ ವಿವರ ಒದಗಿಸುವುದು?	ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಜಸಂಇ 44 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಚುಕ್ಕೆ ಗುರುತಿನ ಪ್ರಶ್ನೆ ಸಂ.1577 ಕ್ಕೆ ಅನುಬಂಧ

ವಿಜಯಪುರ ಜಿಲ್ಲೆ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡು ಪೂರ್ಣಗೊಂಡಿರುವ / ಪ್ರಗತಿಯಲ್ಲಿರುವ ಯೋಜನೆ/ ಕಾಮಗಾರಿಗಳ ವಿವರಗಳು

ಕ್ರ ಸಂ.	ಯೋಜನೆ ಹೆಸರು	ಷರಾ
(ಅ)	ಪೂರ್ಣಗೊಂಡಿರುವ ಯೋಜನೆಗಳು:	
1	ಆಲಮಟ್ಟಿ ಎಡದಂಡೆ ಕಾಲುವೆ	14,600 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
2	ಮುಳವಾಡ ಏತ ನೀರಾವರಿ ಹಂತ-1&2	24,990 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
3	ಇಂಡಿ ಶಾಖಾ ಕಾಲುವೆಯಿಂದ	1,00,429 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
4	ಇಂಡಿ ಏತ ನೀರಾವರಿ ಯೋಜನೆ (ಕಿ.ಮೀ.0.00 ರಿಂದ 97.30 ರವರೆಗೆ)	37,900 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
(ಆ)	ಪ್ರಗತಿಯಲ್ಲಿರುವ ಯೋಜನೆಗಳು:	
1	ಕೃಮೇ.ಯೋ. ಹಂತ-3ರಡಿ ಮುಳವಾಡ ಏತ ನೀರಾವರಿ ಯೋಜನೆ ಹಂತ -3	ಪ್ರಗತಿಯಲ್ಲಿದೆ
2	ಕೃಮೇ.ಯೋ ಹಂತ-3ರಡಿ ಚಿಮ್ಮಲಗಿ ಏತ ನೀರಾವರಿ ಯೋಜನೆ	
3	ಕೃಮೇ.ಯೋ ಹಂತ-3ರಡಿ ಇಂಡಿ ಏತ ನೀರಾವರಿ ಯೋಜನೆ	
4	ಕೋರ್ತಿ-ಕೊಲ್ಹಾರ್ ಸೇತುವೆ ಪುನಃಶ್ಚೇತನ	
5	ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ ಯೋಜನೆ	
6	ನಾಗರಬೆಟ್ಟ ಏತ ನೀರಾವರಿ ಯೋಜನೆ	
7	ಚಡಚಣ ಏತ ನೀರಾವರಿ ಯೋಜನೆ	
8	ತುಬಚಿ-ಬಬಲೇಶ್ವರ ಏತ ನೀರಾವರಿ	
9	ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆ	
10	ವಿಜಯಾಪೂರ ಜಿಲ್ಲೆಯಡಿ ಮಮದಾಪೂರ, ಭೂತನಾಳ, ಬೇಗಂ-ತಲಾಬ್ & ಇತರೆ ಕೆರೆ ತುಂಬುವ ಯೋಜನೆ	ಪೂರ್ಣಗೊಂಡಿದ್ದು ನಿರ್ವಹಣೆ ಹಂತದಲ್ಲಿದೆ
11	ಬೇಗಂ ತಲಾಬ್ ಕೆರೆಯ ಜಲಾಭಿವೃದ್ಧಿ ಕಾಮಗಾರಿ	ಪೂರ್ಣಗೊಳ್ಳುವ ಹಂತದಲ್ಲಿದೆ
12	ವಿಶ್ವ ಬ್ಯಾಂಕ ನೆರವಿನಡಿ ಆಲಮಟ್ಟಿ & ನಾರಾಯಣಪೂರ ಆಣೆಕಟ್ಟುಗಳ ಪುನಃಶ್ಚೇತನ ಅಭಿವೃದ್ಧಿ ಕಾಮಗಾರಿಗಳು	ಬಹುತೇಕ ಪೂರ್ಣಗೊಂಡಿವೆ
13	ಎನ್‌ಎಲ್‌ಬಿಸಿ, ಎಸ್‌ಬಿಸಿ, ಎಂಬಿಸಿ, ಜೆಬಿಸಿ & ಐಬಿಸಿ ಸ್ಕಾಡಾ ಹಂತ-2ರ ಯೋಜನೆ	ಸದರಿ ಪ್ಯಾಕೇಜ್ ಕಾಮಗಾರಿಯಲ್ಲಿ ಐಬಿಸಿ ಸ್ಕಾಡಾ ಹಂತ-2ರ, ಅನುಷ್ಠಾನ ಒಳಗೊಂಡಿದ್ದು, ಪ್ರಗತಿಯಲ್ಲಿದೆ.